ರಾಣಿ ಚನ್ನಮ್ಮ ವಿಶ್ವವಿದ್ಯಾಲಯ,

ಪಾ. ಹೆ. – ೦೪ "ವಿದ್ಯಾಸಂಗಮ" – ಬೆಳಗಾವಿ – ೫೯೧೧೫೬

ಪರೀಕ್ಷಾ ವಿಭಾಗ

RANI CHANNAMMA UNIVERSITY,

N.H. - 04 "VIDYASANGAMA"- BELAGAVI - 591156

"EXAMINATION SECTION"

Web Site: www. rcub.ac.in

E-mail: rcuexam@gmail.com


Ref No: ರಾಚವಿ/ಪರೀಕ್ಷಾ ವಿಭಾಗ/ಬೆಳಗಾವಿ/2021-22/ 1083

Date: 04/08/2021

## ಗೌಪ್ಯ ಆದೇಶ

ವಿಷಯ: ಸ್ನಾತಕ ರಸಾಯನಶಾಸ್ತ್ರ ವಿಭಾಗದ ಪರೀಕ್ಷಾ ಮಂಡಳಿಗೆ(BOE) ಅಧ್ಯಕ್ಷ/ಸದಸ್ಯರಾಗಿ ನೇಮಕ ಮಾಡಿರುವ ಕುರಿತು.

ಉಲ್ಲೇಖ: 1) ದಿನಾಂಕ 19/01/2021 ರಂದು ನಡೆದ ಪರೀಕ್ಷಕರ ನೇಮಕಾತಿ ಮಂಡಳಿ ಸಭೆ ನಿರ್ಣಯ.

2) ಮಾನ್ಯ ಕುಲಪತಿಗಳ ಅನುಮೋದನೆ ಸಂಖ್ಯೆ 2861 ದಿನಾಂಕ:03/02/2021.

| ಅ.ನಂ. | ಪರೀಕ್ಷಕರ ಹೆಸರು | ಮಹಾವಿದ್ಯಾಲಯದ ಹೆಸರು | ಹುದ್ದೆ |
|---|---|---|---|
| ೧ | ಡಾ. ಎ.ಎಸ್.ಜಗನೂರೆ | ಜಿ.ಆಯ್.ಬಾಗೇವಾಡಿ ಮಹಾವಿದ್ಯಾಲಯ ನಿಪ್ಪಾಣಿ | ಅಧ್ಯಕ್ಷರು |
| ೨ | ಶ್ರೀ ಯು.ಎಸ್.ಪೂಜಾರಿ | ಎಸ್.ಬಿ.ಕಲಾ ಹಾಗೂ ಕೆಸಿಪಿ ವಿಜ್ಞಾನ ಮಹಾವಿದ್ಯಾಲಯ ವಿಜಯಪೂರ | ಸದಸ್ಯರು |
| ೩ | ಡಾ. ಪಿ.ಎಸ್. ಮನೋಳಿ | ಡಿ.ವಿ.ಎಸ್.ಎಸ್ ಮಹವಿದ್ಯಾಲಯ ಸಂಕೇಶ್ವರ | ಸದಸ್ಯರು |
| ೪ | ಪ್ರೊ. ಬಿ.ಆಯ್.ವಸೂಲಕರ | ಬಿ.ಕೆ. ಮಹಾವಿದ್ಯಾಲಯ ಬೆಳಗಾವಿ | ಸದಸ್ಯರು |
| ೫ | ಪ್ರೊ. ಆರ್.ಸಿ.ಸೇಟ್ | ಬಿ.ಎಲ್.ಡಿ.ಇ.ಎಸ್ ಮಹಾವಿದ್ಯಾಲಯ ಜಮಖಂಡಿ | ಸದಸ್ಯರು |
| ೬ | ಡಾ. ಪಿ.ಎಸ್.ಕಂದಗಲ್ | ಎಸ್.ವಿ.ಎಮ್. ಮಹಾವಿದ್ಯಾಲಯ ಇಳಕಲ್ | ಸದಸ್ಯರು |

1) ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ 2000ದ ಪ್ರಕರಣ (36) ರನ್ವಯ ತಮ್ಮನ್ನು 2020-21ನೇ ಶೈಕ್ಷಣಿಕ ಸಾಲಿನಲ್ಲಿ ಜರುಗುವ ಸ್ನಾತಕ (U.G) ಪರೀಕ್ಷೆಗಳಿಗೆ ಸಂಬಂಧಿಸಿದಂತೆ **ರಸಾಯನಶಾಸ್ತ್ರ** ವಿಭಾಗದ ಪರೀಕ್ಷಾ ಮಂಡಳಿಯ(BOE) ಅಧ್ಯಕ್ಷ/ ಸದಸ್ಯರನ್ನಾಗಿ ನೇಮಕ ಮಾಡಲಾಗಿದೆ.

2) ಸದರಿ ಆದೇಶವು 2020-21 ಸಾಲಿಗೆ ಅಥವಾ ಮುಂದಿನ ಆದೇಶದವರೆಗೆ ಜಾರಿಯಲ್ಲಿರುತ್ತದೆ. ಹಾಗೂ ಸದರಿ ಆದೇಶವು ವಿಶ್ವವಿದ್ಯಾಲಯವು ಸೂಚಿಸುವ ಬದಲಾವಣೆಗೊಳಪಟ್ಟಿರುತ್ತದೆ.

3) **ಸರ್ಕಾರದ ಆದೇಶ ಸಂಖ್ಯೆ ಇಡಿ 1000 ಯು ಎನ್ ಇ 2000 ದಿ 08-08-2000 ಮತ್ತು ಕರ್ನಾಟಕ ಶಿಕ್ಷಣ ಮಸೂದೆ 1983 ಸೆಕ್ಷನ್ 28 ಹಾಗೂ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ 2000 ಅಧಿನಿಯಮ 73(01)ರನ್ವಯ ಪರೀಕ್ಷಾ ಕಾರ್ಯವನ್ನು ಕಡ್ಡಾಯವಾಗಿ ನಿರ್ವಹಿಸ ತಕ್ಕದ್ದು.**

4) ಈ ಪತ್ರದ ಪರೀಕ್ಷಾ ವಿಷಯಗಳಿಗೆ ಸಂಬಂಧಪಟ್ಟಂತೆ ಗೌಪ್ಯತೆಯನ್ನು ಕಡ್ಡಾಯವಾಗಿ ಕಾಪಾಡುವ ಸಂಪೂರ್ಣ ಜವಾಬ್ದಾರಿಯು ಪರೀಕ್ಷಾ ಮಂಡಳಿಯದಾಗಿರುತ್ತದೆ. ಮತ್ತು ಈ ವಿಷಯಕ್ಕೆ ಸಂಬಂಧಿಸಿದ ಎಲ್ಲಾ ಪತ್ರಗಳನ್ನು ಕುಲಸಚಿವರು (ಮೌಲ್ಯಮಾಪನ) ಇವರ ಹೆಸರಿಗೆ ಮಾತ್ರ ಕಳುಹಿಸಲು ತಿಳಿಸಲಾಗಿದೆ.

5) ತಾವು ಖಾಸಗಿ ಪಾಠ ಮಾಡುತ್ತಿದ್ದರೆ ಅಥವಾ ತಮ್ಮ ಸಂಬಂಧಿಕರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದಲ್ಲಿ ತಾವು ಬೋಧಿಸುವ ವಿಷಯದಲ್ಲಿ ಪರೀಕ್ಷೆ ತೆಗೆದುಕೊಂಡಿದ್ದಲ್ಲಿ ಮಾತ್ರ ಈ ನೇಮಕಾತಿ ಅಸಿಂಧುವಾಗುತ್ತದೆ. ತಾವು ಖಾಸಗಿಯಾಗಿ ಪಾಠ ಮಾಡುತ್ತಿದ್ದರೆ ಹಾಗೂ ತಮ್ಮ ಸಂಬಂಧಿಕರು ರಾಚವಿದಲ್ಲಿ ತಾವು ಬೋಧಿಸುತ್ತಿರುವ ವಿಷಯದಲ್ಲಿ ಪರೀಕ್ಷೆ ತೆಗೆದುಕೊಂಡಿದ್ದರೆ ಅದರ ಸಂಪೂರ್ಣ ವಿವರವನ್ನು ಕುಲಸಚಿವರು (ಮೌಲ್ಯಮಾಪನ) ಇವರಿಗೆ ಪ್ರಾರಂಭದಲ್ಲಿಯೇ ತಲುಪುವಂತೆ ಕಳುಹಿಸಲು ಕೋರಿದೆ.

6) ವಿಶ್ವವಿದ್ಯಾಲಯವು ತಮಗೆ ನಿರ್ವಹಿಸಲು ತಿಳಿಸುವ ಪ್ರಶ್ನೆ ಪತ್ರಿಕೆ ತಯಾರಿಕೆ, ಪ್ರಾಯೋಗಿಕ ಪರೀಕ್ಷೆಗಳು, ಆಚಿತ ಪರೀಕ್ಷೆಗಳು ಹಾಗೂ ಮೌಲ್ಯಮಾಪನ ಕಾರ್ಯಗಳನ್ನು ನಿಗದಿತ ಸಮಯದಲ್ಲಿ ನಡೆಸಲು ತಿಳಿಸಲಾಗಿದೆ ಮತ್ತು ಕಡ್ಡಾಯವಾಗಿದೆ.

7) ಪರೀಕ್ಷಾ ಮಂಡಳಿಯ ಸಭೆ (ಪ್ರಶ್ನೆಪತ್ರಿಕೆ ತಯಾರಿ), ಪ್ರಾಯೋಗಿಕ ಪರೀಕ್ಷೆ, ಆಚಿತ ಪರೀಕ್ಷೆ ಹಾಗೂ ಮೌಲ್ಯಮಾಪನ ಕಾರ್ಯಗಳಿಗೆ ಪರೀಕ್ಷಕ ಮಂಡಳಿಯ ಎಲ್ಲಾ ಸದಸ್ಯರು ಕಡ್ಡಾಯವಾಗಿ ಹಾಜರಿರುವಂತೆ ನೋಡಿಕೊಳ್ಳುವ ಜವಾಬ್ದಾರಿ ಪರೀಕ್ಷಾ ಮಂಡಳಿಯ(BOE) ಅಧ್ಯಕ್ಷರದ್ದಾಗಿರುತ್ತದೆ. ಸಕಾರಣವಿಲ್ಲದೆ ಗೈರುಹಾಜರಾದ ಸದಸ್ಯರ ವಿವರಗಳನ್ನು ಅಧ್ಯಕ್ಷರು ಕುಲಸಚಿವರು(ಮೌಲ್ಯಮಾಪನ) ಇವರಿಗೆ ನೀಡುವದು ಮತ್ತು ಅಧ್ಯಕ್ಷರು ಪರೀಕ್ಷಾ ವಿಭಾಗಕ್ಕೆ ತಿಳಿಸುವದು.

8) **ಸೆಪ್ಟೆಂಬರ್-2021 ತಿಂಗಳಿನಲ್ಲಿ ಜರುಗುವ 2(ರಿಪಿಟರ್ಸ್), 4(ರಿಪಿಟರ್ಸ್) ಹಾಗೂ 6ನೇ(ರೆಗ್ಯೂಲರ/ರಿಪಿಟರ್ಸ್) ಸೆಮಿಸ್ಟರನ ಪ್ರಶ್ನೆಪತ್ರಿಕೆಗಳನ್ನು ದಿನಾಂಕ: 14/08/2021 ರೊಳಗಾಗಿ ಪರೀಕ್ಷಕ ಮಂಡಳಿಯ ಸಭೆಯನ್ನು ಕರೆದು ಅಂತಿಮಗೊಳಿಸಿ ನಡಾವಳಿಯೊಂದಿಗೆ ಪರೀಕ್ಷಾ ವಿಭಾಗಕ್ಕೆ ಸಲ್ಲಿಸಲು ತಿಳಿಸಲಾಗಿದೆ.ಸಭೆಗೆ ಹಾಜರಾಗುವ ಸದಸ್ಯರುಗಳಿಗೆ ವಿಶ್ವವಿದ್ಯಾಲಯದ ನಿಯಮಾವಳಿಯ ಪ್ರಕಾರ ಪ್ರಯಾಣ ಭತ್ಯೆ, ದಿನ ಭತ್ಯೆ ಹಾಗೂ ಸಂಭಾವನೆಗಳನ್ನು ನೀಡಲಾಗುವದು.**

9) ಪರೀಕ್ಷಾ ಮಂಡಳಿಯವರು ಪ್ರಶ್ನೆಪತ್ರಿಕೆಗಳನ್ನು ಸಿದ್ಧಪಡಿಸುವಾಗ ವಿಶ್ವವಿದ್ಯಾಲಯದ ನಿಯಮವನ್ನು ಅನುಸರಿಸಬೇಕು ಹಾಗೂ ಪ್ರಶ್ನೆಪತ್ರಿಕೆಗಳನ್ನು ಕಡ್ಡಾಯವಾಗಿ ಕೈ ಬರಹದ ಮೂಲಕ ತಯಾರಿಸಿ ಅಂತಿಮಗೊಳಿಸಿ ಪರೀಕ್ಷಾ ವಿಭಾಗಕ್ಕೆ ಸಲ್ಲಿಸುವದು. ಪರೀಕ್ಷಾ ಮಂಡಳಿ ಅಧ್ಯಕ್ಷರು ಪ್ರಶ್ನೆಪತ್ರಿಕೆಗಳನ್ನು ಮುಚ್ಚಿದ ಲಕೋಟೆಯಲ್ಲಿ ನೀಡುವುದರ ಪ್ರಯುಕ್ತ ಪರೀಕ್ಷಾ ವಿಭಾಗವು ನಿಯಮಾವಳಿಯ ಪ್ರಕಾರ ತಿದ್ದುಪಡಿ ಮಾಡಲು ಅವಕಾಶವಿಲ್ಲದ ಕಾರಣ ಮುತುವರ್ಜಿವಹಿಸಿ ತಪ್ಪುಗಳನ್ನು ತಿದ್ದುಪಡಿ ಮಾಡಿ ಅಂತಿಮವಾದ ಪ್ರಶ್ನೆಪತ್ರಿಕೆ ನೀಡುವದು. ಮುದ್ರಣ ಕಾಲಕ್ಕೆ ತಪ್ಪಾಗಿದ್ದು ಕಂಡುಬಂದಲ್ಲಿ ಪರೀಕ್ಷಾ ಪ್ರಶ್ನೆಪತ್ರಿಕೆಗಳ ಮುದ್ರಣಕ್ಕೆ ಅಡಚಣೆಯಾದಲ್ಲಿ ಪರೀಕ್ಷಾ ಮಂಡಳಿ ಅಧ್ಯಕ್ಷರು ನೇರ ಹೊಣೆಗಾರರು.

10) ಸದರಿ ಪರೀಕ್ಷೆಯ ಜೊತೆಗೆ ಸುವರ್ಣಾವಕಾಶ(Golden Chance) ಪರೀಕ್ಷೆ ನಡೆಸಲು ನಿರ್ಧರಿಸಿದ್ದು ತಮ್ಮ ವಿಷಯದ ಪ್ರಶ್ನೆಪತ್ರಿಕೆಗಳನ್ನು ತಯಾರಿಸಿ ನೀಡಲು ಸೂಚಿಸಿದೆ.

ಕುಲಸಚಿವರು (ಮೌಲ್ಯಮಾಪನ)

IQAC, Co-ordi...
S.B.Arts & K.C.P.Science College,
Vijayapur.

PRINCIPAL,
:RTS & K.C.P. SCIENCE COLLEGE
VIJAYAPUR.